**ಸಾಕ್ಷಿಗೆ ದಿನಾಂಕಃ 27.07.2026 ರಂದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಕೆ.ಕೆ.ಎನ್. ವಕೀಲರಿಂದಃ**

ಈ ದಾವೆಯ 1 ನೇ ವಾದಿಯು ನ್ನನ ತಮ್ಮನ ಹೆಂಡತಿ ಎಂದರೆ ಸರಿ. 2 ನೇ ವಾದಿಯು ಅವರ ಮಗಳು ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯು ನನಗೆ ಸಹೋದರ ಎಂದರೆ ಸರಿ. ನಮ್ಮ ತಂದೆ ಅಣ್ಣೇಗೌಡರಿಗೆ ಮೂರು ಜನ ಮಕ್ಕಳು. ನಮ್ಮ ತಾಯಿಯ ಹೆಸರು ಚಿಕ್ಕದೇವಮ್ಮ. ನನ್ನ ತಮ್ಮ ಮಂಜುನಾಥ ತೀರಿಕೊಂಡಿರುತ್ತಾರೆ ಎಂದರೆ ಸರಿ. ಈ ದಾವೆಯನ್ನು ಯಾವ ಉದ್ದೇಶಕ್ಕಾಗಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವೆಯನ್ನು ಯಾವ ಆಸ್ತಿಗೆ ಹಾಕಿರುತ್ತಾರ ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತುಗಳು ನಮ್ಮ ತಂದೆಗೆ ಪಿತ್ರಾರ್ಜಿತವಾಗಿ ಬಂದಿರುತ್ತವೆ ಎಂದರೆ ಸರಿ. ದಿ.12.09.1959 ರಂದು ನಮ್ಮ ತಂದೆ ಸದರಿ ಸ್ವತ್ತುಗಳನ್ನು ನಮ್ಮ ತಾಯಿಗೆ ಕ್ರಯಕ್ಕೆ ಕೊಟ್ಟಿರುತ್ತಾರೆ ಎಂದರೆ ಸರಿ.

ನಮ್ಮ ತಂದೆಗೆ ನಮ್ಮ ತಾಯಿಯ ಹೆಸರಿಗೆ ಕ್ರಯ ಪತ್ರ ಮಾಡುವ ಅಧಿಕಾರ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಾಯಿ ನನಗೆ 40x50 ಅಡಿ ನಿವೇಶನವನ್ನು ಕೊಟ್ಟಿರುತ್ತಾರೆ ಎಂದರೆ ಸರಿ. 2 ನೇ ಪ್ರತಿವಾದಿಗೆ 29x24 ಅಡಿ ಅಡಿ ನಿವೇಶನವನ್ನು ಕೊಟ್ಟಿರುತ್ತಾರೆ ಎಂದರೆ ಸರಿ. ಮಂಜುನಾಥ್ ಎನ್ನುವವರಿಗೆ 29x24 ಅಡಿ ನಿವೇಶನವನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಂಜುನಾಥ್ ರವರಿಗೆ ನೀಡಿದ ಸ್ವತ್ತಿನಲ್ಲಿ ನನಗೆ ಅಕ್ರಮವಾಗಿ 16x10 ಅಡಿಯನ್ನು ನಮ್ಮ ತಾಯಿ ದಾನ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಗಳ ಹೆಸರಿನಲ್ಲಿ 29x24 ಅಡಿ ಇರುತ್ತದೆ ಎಂದರೆ ಸರಿ. ಸದರಿ ಜಾಗದಲ್ಲಿ ಮೊದಲು ವಾದಿಗಳು ವಾಸವಿದ್ದರು ಎಂದರೆ ಸರಿ. ಸದರಿ ಮನೆಯು ಬಿದ್ದುಹೋಗುವ ಸ್ಥಿತಿಯಲ್ಲಿ ಇರುವದರಿಂದ ಅವರು ವಾಸವಿರುವುದಿಲ್ಲ ಎಂದರೆ ಸರಿಯಲ್ಲ.

ನಾವುಗಳು ವಾದಿಗೆ ತೊಂದರೆ ನೀಡಿದ ಕಾರಣ ಅಸಲು ದಾವಾ ಸಂಖ್ಯೆ 151/2011 ನ್ನು ಸಲ್ಲಿಸಿದ್ದೆನು ಎಂದರೆ ಸರಿಯಲ್ಲ. ಸದರಿ ದಾವೆಯು ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ತಂದೆಯ ಆಸ್ತಿಗಳನ್ನು ಅವರ ಮೂರು ಜನ ಮಕ್ಕಳಿಗೆ ಸಮಾನವಾಗಿ ಹಂಚಿರುವುದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ವಾದಿಗಳಿಗೆ ದಾವಾ ಸ್ವತ್ತುಗಳಿಗೆ ಸಮವಾದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ.

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.